SRI H.C. SRIKANTAIAH (Minister for Municipal Administration).—

(a) Yes.

(b) No.

ಶ್ರೀ ಐ. ಪಿ. ಡಿ. ಸಾಲಪ್ಪ.—ಇಲ್ಲಿ ಒದಗಿಸಿರುವ ಉತ್ತರದಂತೆ, ಸ್ಥಳೀಯ ಸಂಸ್ಥೆಗಳಲ್ಲಿ ಹಣದ ಮುಗ್ಗಟ್ಟಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಮತ್ತು ಪೌರ ಕಾರ್ಮಿಕರಿಗೆ ಸಂಬಳ ಕೊಡದೆ ಇರುವ ಪರಿಸ್ಥಿತಿ ಇರುವುದನ್ನು ಸರ್ಕಾರ ಒಪ್ಪಿದೆ. ಅನೇಕ ಮುನಿಸಿಪಾಲಿಟಿಗಳಲ್ಲಿ ಹಣದ ಮುಗ್ಗಟ್ಟಿನ ದೆಸೆಯಿಂದಾಗಿ ಸರ್ಕಾರ ಹೊರಡಿಸಿರುವ ಆಜ್ಞೆಯೊಂದನ್ನೂ ಅವರು ಜಾರಿಗೆ ಕೊಡುವುದ ಕ್ಕಾಗುವುದಿಲ್ಲ, ವಿಶ್ರಾಂತಿ ವೇತನ, ಗ್ರಾಚುಯಿಟಿ, ಡ್ರೆಸ್, ಸೋಪು–ಇವುಗಳೊಂದನ್ನೂ ನೀಡುತ್ತಿಲ್ಲ. ಕಾರಣ ಕೇಳಿದರೆ, ಮುನಿಸಿಪಾಲಿಟಿಯವರು ಹಣದ ಮುಗ್ಗಟ್ಟು ಎಂದು ಹೇಳುತ್ತಾರೆ. ಆದರೆ ಸರ್ಕಾರ ಆಜ್ಞೆ ಹೊರಡಿಸುವುದು ''ಮಾಡಿದರೆ ಮಾಡಿ, ಬಿಟ್ಟರೆ ಬಿಡಿ'' ಎನ್ನುವ ಅರ್ಥದಿಂದಲೋ ಅಥವಾ ಆಜ್ಞೆಯನ್ನು ಜಾರಿಗೆ ಕೊಡಲೇಬೇಕೆನ್ನುವ ಉದ್ದೇಶದಿಂದಲೊ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಹೊರಡಿಸಿರುವ ಆಜ್ಞೆಯ ಪ್ರಕಾರ ಯಾವ ಯಾವ ಮುನಿಸಿಪಾಲಿಟಿಗಳು ಸೌಲಭ್ಯಗಳನ್ನು ನೀಡುತ್ತಿಲ್ಲವೆಂಬುದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ, ಅದನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಐ. ಪಿ. ಡಿ. ಸಾಲಪ್ಪ.—ಇದು ಎಲ್ಲಾ ಮುನಿಸಿಪಾಲಿಟಿಗಳಲ್ಲೂ ನಡೆಯುತ್ತಿದೆ. ಮಾನ್ಯ ಸಚಿವರ ಊರಿನ ಮುನಿಸಿಪಾಲಿಟಿಯಲ್ಲೂ ಕೊಡುತ್ತಿಲ್ಲ ಬಹುಶ: ಇದು ಅವರಿಗೂ ತಿಳಿದಿರಬಹುದು. ತಿಳಿದಿರದಿದ್ದರೆ ಅಲ್ಲಿಂದ ವಿವರವನ್ನು ತರಿಸಿಕೊಳ್ಳಬಹುದು. ಮಂತ್ರಿಗಳ ಊರಿನ ಮುನಿಸಿಪಾಲಟಿಯಲ್ಲೆ ಕೊಡದೇ ಇರುವಾಗ ಇನ್ನು ಬೇರೆ ಊರಿನ ಮುನಿಸಿಪಾಲಿಟಿಗಳಲ್ಲಿ ಕೊಡುತ್ತಿಲ್ಲವೆಂದು ಬೇರೆ ಹೇಳಬೇಕೆ? ಮಾನ್ಯ ಸಚಿವರು ಇದರ ಬಗ್ಗೆ ಏನಾದರೂಂದು ವ್ಯವಸ್ಥೆ ಮಾಡಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಂತ್ರಿಗಳ ಊರಿನ ಮುನಿಸಿಪಾಲಿಟಿಯಲ್ಲಿ ಕೊಡದೆ ಇರುವುದು ಮಂತ್ರಿಗಳ ಗಮನಕ್ಕೇ ಬಂದಿಲ್ಲ. ಅಂತಹ ವಿಚಾರ ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಈಗಲೂ ಸರ್ಕಾರದ ಗಮನಕ್ಕೆ ನಾನು ತರಬಯಸುತ್ತೇನೆ ಅದನ್ನು ಸರಿಪಡಿಸುವುದಕ್ಕೆ ತಾವು ಆಶ್ವಾಸನೆ ನೀಡುವಿರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಮಟ್ಟಿಗೆ ಸರಿಪಡಿಲಾಗುವುದು.

## Houses provided to Government Employees in Gulbarga City.

784. SRI M. Y. PATIL (Afzalpur).—Will the Minister for Public Works be pleased to state:

(a) the number of houses provided to Government employees in Gulbarga City ;

(b) whether those houses have been provided to the employees of all the Department ;

(c) if so, the number of houses provided to the employees/Department wise information be furnished ?

SRI S. BANGARAPPA (Minister for Public Works),—

(a) 1272.

(b) Yes.

(c) Statement appended.

STATE ENT

Showing the number of quarters constructed at Gulbarga and occupation department wise:

| Sl. No. | Name of Department | Houses built under Rental Housing Scheme | Houses built for use of concerned Department (including designated Quarters). | Total |
|---|---|---|---|---|
| 1 | 2 | 3 | 4 | 5 |
| 1 | Revenue Department ... | 49 | 9 | 58 |
| 2 | Education Department ... | 98 | 5 | 103 |
| 3 | P. W. D ... | 42 | 27 | 69 |
| 4 | Government Branch Press ... | 22 | 13 | 35 |
| 5 | State Vigilance Commission | 2 | ... | 2 |
| 6 | Planning Department ... | 1 | ... | 1 |
| 7 | Horticulture Department ... | 6 | ... | 6 |
| 8 | Block Development ... | 2 | ... | 2 |
| 9 | Fisheries Department ... | 2 | ... | 2 |
| 10 | Social Welfare Department | 14 | ... | 14 |
| 11 | Excise Department ... | 3 | ... | 3 |
| 12 | Karnataka Urban Water Supply, Drainage Board... | 14 | ... | 14 |
| 13 | Agriculture Department ... | 7 | ... | 7 |
| 14 | Judicial Department ... | 17 | ... | 17 |
| 15 | Medical and Health ... | 9 | 257 | 266 |
| 16 | Commercial Tax Department ... | 5 | ... | 5 |
| 17 | National Savings ... | 3 | ... | 4 |
| 18 | Employment ... | 4 | ... | 3 |
| 19 | Transport ... | 2 | ... | 2 |
| 20 | Police Department ... | 1 | 530 | 531 |
| 21 | Information and Publicity Department ... | 2 | ... | 2 |
| 22 | Indian P& T ... | 3 | ... | 3 |
| 23 | Registration Department ... | 2 | ... | 2 |
| 24 | Marketing Department ... | 3 | ... | 3 |
| 25 | All India Radio ... | 9 | ... | 9 |
| 26 | Electricity Board ... | 1 | ... | 1 |

| 1 | 2 | 3 | 4 | 5 |
|---|---|---|---|---|
| 27 | Industrial Training Institute ... | 1 | 10 | 11 |
| 28 | K.S.R.T.C. ... | 1 | ... | 1 |
| 29 | Local Audit Cell ... | 2 | ... | 2 |
| 30 | Archaeological Department | 1 | ... | 1 |
| 31 | Government Milk Dairy ... | 1 | 15 | 16 |
| 32 | District Training Institute | 4 | ... | 4 |
| 33 | Mines and Geological Department ... | 10 | ... | 10 |
| 34 | City Municipal Council ... | 2 | ... | 2 |
| 35 | Labour Department ... | 4 | ... | 4 |
| 36 | Statistical Department ... | 2 | ... | 2 |
| 37 | Youth Services ... | 3 | ... | 3 |
| 38 | Agro Industries Corporation ... | 1 | ... | 1 |
| 39 | Defence Service ... | 5 | ... | 5 |
| 40 | Co-operative Societies ... | 2 | ... | 2 |
| 41 | Fire Force Station Department ... | ... | 32 | 32 |
| 42 | Forest Office ... | ... | 6 | 6 |
| 43 | Veterinery & Animal Husbandry Department ... | ... | 6 | 6 |
| | Total | 362 | 910 | 1272 |

ಶ್ರೀ ಎಂ. ವೈ. ಪಾಟೀಲ್.—ಗುಲ್ಬರ್ಗ ನಗರದ ಎಲ್ಲಾ ಸರ್ಕಾರಿ ಇಲಾಖೆಗಳ ನೌಕರರಿಗೂ ನಿವೇಶನ ಕೊಡಲಾಗಿದೆ ಎಂದು ಉತ್ತರದಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ, ಆಂಕಿ ಅಂಶಗಳನ್ನು ನೋಡಿದರೆ, ನಿವೇಶನ ಪಂಚುವುದರಲ್ಲಿ ಸರ್ಕಾರ ತಾರತಮ್ಯಧೋರಣೆ ತಾಳಿದೆ ಎಂದು ಗೊತ್ತಾಗುತ್ತದೆ. ಲೋಕೋಪಯೋಗಿ, ಕಂದಾಯ ಮತ್ತು ಶಿಕ್ಷಣ ಇಲಾಖೆ ನೌಕರರಿಗೆ ಹೆಚ್ಚು ನಿವೇಶನಗಳನ್ನು ಕೊಟ್ಟು ಉಳಿದ ಎಲ್ಲಾ ಇಲಾಖೆಗಳಿಗೆ ಸರಿಯಾಗಿ ನಿವೇಶನವನ್ನು ಕೊಟ್ಟಿಲ್ಲವೆಂದು ಹೇಳುತ್ತೇನೆ. ಆದುದರಿಂದ, ಮಾನ್ಯ ಸಚಿವರು ಎಲ್ಲಾ ಇಲಾಖೆಯ ನೌಕರರಿಗೂ ಸರಿ ಸಮಾನವಾಗಿ ನಿವೇಶನ ಹಂಚುವ ಬಗ್ಗೆ ವ್ಯವಸ್ಥೆ ಮಾಡುವರೆ ?

† ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆ ಮನೆಗಳಿಗೆ ಸಂಬಂಧಪಟ್ಟಿದ್ದು, ನಿವೇಶನಗಳಿಗಲ್ಲ. ಮಾನ್ಯ ಸದಸ್ಯರು 'ಮನೆ' ಶಬ್ದದ ಬದಲು 'ನಿವೇಶನ' ಶಬ್ದವನ್ನು ಬಳಸಿದರೆಂದು ನಾನು ಭಾವಿಸುತ್ತೇನೆ ಅಲ್ಲಿ ಒಟ್ಟು ೧,೨೭೨ ಮನೆಗಳಿವೆ. ಸಾಮಾನ್ಯವಾಗಿ, ಕಂದಾಯ ಶಿಕ್ಷಣ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಹೆಚ್ಚು ನೌಕರರಿರುತ್ತಾರೆ ಮತ್ತು ಅವರಿಗೆ ಮನೆಗಳನ್ನು ಹಂಚುವುದರಲ್ಲಿ ಹೆಚ್ಚು ಪರ್ಸೆಂಟೇಜನ್ನೂ ಕೊಟ್ಟಿರುತ್ತಾರೆ. ಇಲಾಖೆಗಳು ದೊಡ್ಡದಾಗಿರುವುದರಿಂದ ನೌಕರರೂ ಹೆಚ್ಚು ಇರುತ್ತಾರೆನ್ನುವ ದೃಷ್ಟಿಯಿಂದ ಹೀಗೆ ಮಾಡಲಾಗಿದೆಯೇ ಹೊರತು, ಬೇರೆ ಯಾವ ತಾರತಮ್ಯವನ್ನೂ ಮಾಡಿಲ್ಲ.

ಶ್ರೀ ಎಂ. ವೈ. ಪಾಟೀಲ್.—ಕೃಷಿ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಮತ್ತು ಲೋಕಲ್ ಆಡಿಟ್ ಸೆಲ್ ಇಲಾಖೆಗಳೆಲ್ಲಾ ದೊಡ್ಡ ಇಲಾಖೆಗಳೇ ಆಗಿವೆ. ಆದರೆ, ಅವರಿಗೆ ಮಾತ್ರ ಕೇವಲ ಏಳೆಂಟು ಮನೆಗಳನ್ನು ಹಂಚಲಾಗಿದೆ. ಅಲ್ಲಿ ಕ್ಲಾಸ್(೧) ಅಧಿಕಾರಿಗೆ ಕೂಡ ಮನೆ ಸಿಕ್ಕದೆ ಅವರು ಬಾಡಿಗೆ ಕೊಟ್ಟು ಸಣ್ಣ ಮನೆಯೊಂದರಲ್ಲಿದ್ದಾರೆ. ಆದುದರಿಂದ, ಸರ್ಕಾರದವರು ಮನೆಗಳನ್ನು ಹಂಚುವುದರಲ್ಲಿ ಸರ್ವ ಸಮಾನವಾದ ಧೋರಣೆಯನ್ನನುಸರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆರೇಷ್ಟು ವರ್ಷಗಳಿಗೆ ಎಲ್ಲ ಇಲಾಖೆಯ ಅಧಿಕಾರಿಗಳಿಗೂ ಮನೆಗಳನ್ನು ಒದಗಿಸಿಕೊಡಬೇಕೆನ್ನುವುದು ಸರ್ಕಾರದ ಇಚ್ಛೆಯಾಗಿದೆ ಆದರೆ, ಇಲ್ಲಿ ಸ್ವಲ್ಪ ಹಣಕಾಸಿನ ಮುಗ್ಗಟ್ಟು ಇದೆ. ಕೃಷಿ ಮತ್ತಿತರ ಇಲಾಖೆಗಳು ದೊಡ್ಡವಿದ್ದರೂ ಅಲ್ಲಿನ ನೌಕರರಿಗೆ ಕಡಮೆ ಮನೆಗಳನ್ನು ಹಂಚಲಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಕೆಲವು ಇಲಾಖೆಗಳು ಮೊದಲೆ ದೊಡ್ಡವಾಗಿರುತ್ತವೆ ಮತ್ತೆ ಕೆಲವು ಇಲಾಖೆಗಳು ಮೊದಲು ಸಣ್ಣವಾಗಿದ್ದು ಬರುಬರುತ್ತಾ ದೊಡ್ಡವಾಗುತ್ತವೆ. ಆದರೂ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಮುಂದೆ ಮನೆಗಳನ್ನು ತೆಗೆದುಕೊಳ್ಳುವಾಗ, ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಒದಗಿಸುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಎಂ. ವೈ. ಪಾಟೀಲ್.—ಎಲ್ಲಾ ಇಲಾಖೆಗಳಿಗೂ ಡೆಸಿಗ್ನೇಷನ್ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಆದನ್ನು ಪರಿಶೀಲನೆ ಮಾಡಲಾಗುವುದು.

## Electrification of villages in Thirthahalli and Hosanagar Taluk.

822 SRI KADIDAL DIVAKARA (Thirthahalli).—Will the Minister of State for Information and Youth Services be pleased to state :—

(a) how many villages in Thirthahalli and Hosanagar Taluks have been supplied with electricity (please furnish the information separately) ;

(b) how many villages are yet to be electrified and when will they be electrified ;

(c) in these taluks where most of the hydro-electric projects are located and the people have suffered because of these projects, why they have not been provided with the facilities ?

SRI K. H. SRINIVASA (Minister of State for Information and Youth Services).—

| | | | Villages electrified as on 30-6-1978 |
|---|---|---|---|
| (a) | Thirthahally | ... | 187 |
| | Hosanagar | ... | 88 |
| (b) | Thirthahally | ... | 58 |
| | Hosanagar | ... | 112 |

(c) Every effort is being made to electrify as many villages as possible with the available funds.